ಕಂಪು

ಕಂನಡಿಗರ ಪೆಂಪು

ಮಲ್ಲಿಗೆ ಕನ್ನಡ ಸಂಘದ ಇ-ಪತ್ರಿಕೆ
ದೀಪಾವಳಿ ಸಂಚಿಕೆ

Newsletter of MKANT
Deepavali 2010

www.mallige.org



mkantcommittee
@gmail.com



## ದೀಪಾವಳಿ ಹಾರೈಕೆ

**ಪೂರ್ಣಿಮಾ ಸುಬ್ರಹ್ಮಣ್ಯ**

**ತ**ಮಸೋಮಾ ಜ್ಯೋತಿರ್ಗಮಯ– ಕತ್ತಲಿಂದ ಬೆಳಕಿನೆಡೆಗೆ ನಡೆ ಎಂದರು ಹಿರಿಯರು. ಯಾವುದೀ ಕತ್ತಲು? ಎಲ್ಲಿದೆ ಬೆಳಕು?ಏನೂ ಕಾಣಿಸದ ಸ್ಥಿತಿ ಮಾತ್ರ ಕತ್ತಲಲ್ಲ. ಕಣ್ಣು ಕೋರೈಸುವ ಪ್ರಕಾಶ ಮಾತ್ರ ಬೆಳಕಲ್ಲ.ನಮ್ಮ ಆತ್ಮಸ್ಥೈರ್ಯವನ್ನು ಕುಗ್ಗಿಸುವ ಯಾವುದೇ ವಿಷಯ, ವಸ್ತು, ಘಟನೆ ಕತ್ತಲಾದರೆ; ಆ ಕತ್ತಲ ಕರಗಿಸುವ ಚೈತನ್ಯವೇ ಬೆಳಕು. ಆ ಬೆಳಕಿನ ಒಂದು ಆಕರ ಹಣತೆ. ಸಂಗೀತಗಾರನಿಗೆ ನಾದವೇ ಹಣತೆ, ನರ್ತಕಿಗೆ ನೃತ್ಯದ ಹಣತೆ, ಸಾಹಿತಿಗೆ ಅಕ್ಷರದ ಹಣತೆ,ಕರ್ಮಯೋಗಿಗೆ ಕಾಯಕವೇ ಹಣತೆ.ಯಾರಿಗೆ ಯಾವುದರಲ್ಲಿ ಸಂತೋಷವೋ ಅದೇ ಅವರ ಬೆಳಕು. ಆ ಬೆಳಕಿನ ಸಂಭ್ರಮವೇ ದೀಪಾವಳಿ. ಬೆಳಕಿನ ಆಕರಗಳ ಬೆಸುಗೆಯ ಸಂಕೇತವೇ ಸಾಲುಹಣತೆ.

ನಮ್ಮಲ್ಲಿ ದೀಪಾವಳಿಗೆ ಪೌರಾಣಿಕ ಪ್ರತೀತಿ ಇದೆ, ಸಾಂಸ್ಕೃತಿಕ ಸೊಗಡಿದೆ, ಜೊತೆಗೆ ಪ್ರಾದೇಶಿಕ ಆಚರಣೆಗಳ ಪ್ರತ್ಯೇಕತೆಯೂ ಇದೆ. ಎಲ್ಲವನ್ನೂ ಬೆಸೆಯುವ "ತಮಸೋಮಾ ಜ್ಯೋತಿರ್ಗಮಯ" ಎಂಬ ಸೂತ್ರವೂ ಇದೆ.ಎಲ್ಲಕ್ಕಿಂತ ಹೆಚ್ಚಾಗಿ,ಮನುಷ್ಯ ಜಾಗತಿಕ ಮಟ್ಟದಲ್ಲಿ ಕ್ರಿಯಾಶೀಲವಾಗಿರುವ ಈ ಕಾಲಘಟ್ಟದಲ್ಲಿ "ಆನೋ ಭದ್ರಃ ಕೃತವೋ ಯಂತು ವಿಶ್ವತಃ" (Let noble thoughts come to us from everywhere) ಎನ್ನುವ ಮಾತಿಗೆ ಹೆಚ್ಚು ಅರ್ಥವೂ ಇದೆ.ಬೆಳಕು ಎಲ್ಲೆಡೆಯಿಂದ ಬರಲಿ, ನೋಡುವ ಒಳಗಣ್ಣು ತೆರೆದಿರಲಿ.

ಈ ಸಂದರ್ಭದಲ್ಲಿ ನೆನಪಿಗೆ ಬಂದದ್ದು ಶ್ರೀ ಕೆ.ಎಸ್.ನರಸಿಂಹಸ್ವಾಮಿಯವರ ಕವನವೊಂದರ ಸಾಲು – ದೀಪಾವಳಿಯ ಜ್ಯೋತಿ ಅಭಯ ಹಸ್ತವನೆತ್ತಿ ಎಲ್ಲರಿಗೆ ಎಲ್ಲಕ್ಕೆ ಶುಭ ಕೋರಲಿ!

*****

## ಹನುಮಾನ್ ಮಂದಿರದಲ್ಲಿ ಗಾನಸುಧೆ

**ಅ**ಕ್ಟೋಬರ್ 10, 2010ರ ಭಾನುವಾರ ಸಂಜೆ ಫ್ರಿಸ್ಕೋ ನಗರದ ಹನುಮಾನ್ ಮಂದಿರದಲ್ಲಿ ಶ್ರೀ ರಾಯಚೂರು ಶೇಷಗಿರಿ ದಾಸರಿಂದ, ದಾಸರ ಪದಗಳ ಹಾಡುಗಾರಿಕೆ.

ಮಲ್ಲಿಗೆ ಕನ್ನಡ ಸಂಘದ ಸ್ಥಾಪಕ ಅಧ್ಯಕ್ಷೆ ಶ್ರೀಮತಿ ಕಲ್ಪನಾ ರಾವ್ ಸ್ಮರಣಾರ್ಥ ನಡೆದ ಈ ಕಚೇರಿಯ ಸಹ–ಪ್ರಾಯೋಜಕತ್ವ ಮಲ್ಲಿಗೆ ಕನ್ನಡ ಸಂಘದ್ದು.ಹಿಂದೂಸ್ತಾನಿ ಸಂಗೀತ ವಿದ್ವಾಂಸರಾದ ಶ್ರೀ ಶೇಷಗಿರಿದಾಸರು ತನ್ಮಯರಾಗಿ ಹಾಡಿದ "ವಂದಿಪೆ ನಿನಗೆ ಗಣನಾಥ", "ರಥವನೇರಿದ ರಾಘವೇಂದ್ರ", "ಪವಮಾನ ಜಗದ ಪ್ರಾಣ", "ಭಾಗ್ಯದ ಲಕ್ಷ್ಮೀ ಬಾರಮ್ಮ" ಮೊದಲಾದ ಹಲವು ಕೃತಿಗಳಿಂದ ಸಂಗೀತರಸಿಕರು ಪರವಶರಾದರು. ಇವರಿಗೆ ತಾಳ ಮೃದಂಗಗಳಲ್ಲಿ ಜೊತೆಯಾದವರು ಶ್ರೀ ರಮೇಶ್ ಹೆಗಡೆ ಹಾಗೂ ಶ್ರೀ ರಾಜೀವ್ ಕುಲಕರ್ಣಿ.

******

ಕಂಪು

ಕಂನಡಿಗರ ಪೆಂಪು

ಮಲ್ಲಿಗೆ ಕನ್ನಡ ಸಂಘದ ಇ-ಪತ್ರಿಕೆ
ದೀಪಾವಳಿ ಸಂಚಿಕೆ

Newsletter of MKANT
Deepavali 2010

www.mallige.org



mkantcommittee
@gmail.com



## ಪಾರ್ ಪಾರ್ಕಿನಲ್ಲಿ ಪಿಕ್‌ನಿಕ್

ಅಕ್ಟೋಬರ್ 2, 2010 ಡಾಲ್ಲಸ್-ಫ್ಹೋರ್ಟ್‌ವರ್ತ್ ಮಹಾನಗರದಲ್ಲಿ ಆಹ್ಲಾದಕರ ಹವೆ. ಕೊರೆವ ಚಳಿಯಿಲ್ಲ, ಸುರಿವ ಮಳೆಯಿಲ್ಲ, ಸುಡುವ ಬಿಸಿಲಿಲ್ಲ.ಇಂಥಹ ಸುಂದರ ಹವೆಯಲ್ಲಿ ಗ್ರೇಪ್‌ವೈನ್‌ನ ಪಾರ್ ಪಾರ್ಕಿನಲ್ಲಿ ಕನ್ನಡ ಕಲರವ.ಇಲ್ಲಿಯ ಮಲ್ಲಿಗೆ ಸಂಘದ ಆಯೋಜನೆಯಲ್ಲಿ, ಹಲವಾರು ಕನ್ನಡ ಕುಟುಂಬಗಳು ಒಟ್ಟಿಗೆ ಕಲೆತು ಓಟ-ಆಟ-ಊಟಗಳ ರಸಾನುಭವ. ಬೆಳಗ್ಗೆ 9:30ಯಿಂದ ಸಂಜೆ ಸುಮಾರು 4ಘಂಟೆವರೆಗೆ ನಡೆದ ಪಿಕ್‌ನಿಕ್ ವಿಶೇಷವೆಂದರೆ ವಾಕಥಾನ್, ಖೋ-ಖೋ, ಪ್ರಥಮಾಕ್ಷರಿ ಆಟಗಳು ಹಾಗೂ ಸಮಿತಿ ಸದಸ್ಯರು ಮತ್ತು ಸ್ವಯಂಸೇವಕರು ತಯಾರಿಸಿದ ಸ್ವಾದಿಷ್ಟ ಊಟ.

Battered Womens Foundation ಸಹಾಯಾರ್ಥ ನಡೆದ ವಾಕಥಾನ್‌ನಲ್ಲಿ ಹೆಚ್ಚಿನವರು ಸುಮಾರು 1.5 ಮೈಲಿ ನಡೆದರೆ, ಕೆಲವರು 5ಮೈಲಿ ನಡೆದ ಸಾಹಸಿಗರು. ಸಂಗ್ರಹವಾದದ್ದು ಸುಮಾರು 350ಡಾಲರ್. ದಣಿದವರನ್ನು ತಣಿಸಲು ಹಿತವಾದ ಮಜ್ಜಿಗೆ, ನಿಂಬೆಪಾನಕ ವ್ಯವಸ್ಥೆಯಾಗಿತ್ತು.ನಂತರ ನಡೆದ ಖೋ-ಖೋ ಆಟದಲ್ಲಿ ಎಲ್ಲರೂ ನಾನು-ತಾನೆಂದು ಮುಂದೆ ಬಂದು ಆಡಿದರು.ಕೀಟಲೆ-ನಗುವಿನಿಂದ ಕೂಡಿದ ಆಟ ಎಲ್ಲರಿಗೂ ಬಹಳ ಖುಶಿಕೊಟ್ಟಿತು. ಪುಟಾಣಿಗಳೆಲ್ಲ ಜೋಕಾಲಿ, ಜಾರುಗುಪ್ಪೆಗಳಲ್ಲಿ ಜಮ್ಮಂತ ಜಾಲಿಯಾಗಿದ್ರು.

ನಂತರ ಊಟದ ಸಮಯ.ಢೋಕ್ಲಾ, ಇಡ್ಲಿ-ಸಾಂಬಾರ್, ಪೂರಿ-ಪಲ್ಯ, ಚಪಾತಿ-ಚೋಲೆ, ಪುಳಿಯೋಗರೆ, ಬಿಸಿಬೇಳೆಬಾತ್, ಮೊಸರನ್ನದ ಸಮೃದ್ಧ ಭೋಜನ. ಜೊತೆಗೆ ಕಲ್ಲಂಗಡಿ ಮೊದಲಾದ ಹಣ್ಣುಗಳು.ಊಟದ ಜೊತೆ ಪ್ರಥಮಾಕ್ಷರಿ ಆಟ.ತಮಗೆ ದೊರೆತ ಎಲ್ಲಾ ಅಕ್ಷರಗಳಿಂದ ಶುರುವಾಗುವ ಚಿತ್ರಗೀತೆ ಹಾಡಿ ಗೆದ್ದವರು ಸಹನಾ ಸುನಿಲ್.ಊಟದ ನಂತರ ಮತ್ತಷ್ಟು ಹರಟೆ-ಆಟ.

ಪಿಕ್‌ನಿಕ್ ಮುಗಿದ ಮೇಲೆ ಕೆಲವರಿಗೆ ಕಾಲು ನೋವು.ಅಯ್ಯೋ, how, unfit we have become ಎನ್ನುವ ಹಳಹಳಿಕೆ. ಆದಷ್ಟು ಬೇಗ ಮತ್ತೆ ಫ್ಹಿಟ್ ಆಗುವ ಬಯಕೆ. ಕಳೆದ ಕ್ಷಣಗಳ ಮೆಲುಕಿನಲ್ಲಿ ಸಿದ್ಧ, ದೀಪಾವಳಿಯ ಸಂಭ್ರಮಕ್ಕೆ.

******

## ನಗೆಹನಿ

**ರಮೇಶ್ ಮೇಲ್ಕೋಟೆ**

ಸಿದ್ದ: ಡಾಕ್ಟ್ರೆ, ನನಗೆ ಮೈಯೆಲ್ಲಾ ತುಂಬಾ ನೋವುತ್ತಿದೆ.
ಡಾಕ್ಟರ್: ಎಲ್ಲಪ್ಪ ನೋವು?
ಸಿದ್ದ: ತಲೆ ಇಂದ ಕಾಲುವರೆಗು ಡಾಕ್ಟರೆ
ಡಾಕ್ಟರ್: ಏನು ಮಾಡಿದಾಗ ನೋವುತ್ತಪ್ಪಾ?
ಸಿದ್ದ: ಎಲ್ಲಿ ಮುಟ್ಟಿದರೂ ನೋವುತ್ತೆ ಡಾಕ್ಟರೆ
ಡಾಕ್ಟರ್: ಅಲ್ಲ ಸಿದ್ದ-ನಿನ್ನ ಬೆರಳಿಗೆ ಉಗುರುಸುತ್ತು ಬಂದಿದೆ -ಅದಕ್ಕೆ!

*

ಹೆಂಡತಿ: ರೀ! ಪಕ್ಕದ ಮನೆ ಆಕೆ ಹೇಳಿದ್ಲು-ಸ್ವರ್ಗದಲ್ಲಿ ಗಂಡ ಹೆಂಡತಿ ಒಟ್ಟಿಗೆ ಇರಲು ಬಿಡಲ್ವಂತೆ!? ಗೊತ್ತಾ?
ಗಂಡ: ಅದಕ್ಕೆ ಅದನ್ನು ಸ್ವರ್ಗ ಅಂತ ಕರೀತಾರೆ ಅನ್ಸುತ್ತೆ ಕಣೆ!

www.mallige.org



mkantcommittee
@gmail.com



ಹೆಂಡತಿ: ರೀ! ಹೊಸ ಕಾರ್ carburettorನಲ್ಲಿ ನೀರು ತುಂಬಿಕೊಂಡಿದೆ ಅನ್ಸುತ್ತೆ.
ಗಂಡ: ಹೌದಾ? ಪರ್ವಾಗಿಲ್ವೆ! ಹೇಗೇ ಗೊತ್ತಾಯ್ತು? ಸ್ಟಾರ್ಟ್ ಆಗ್ತಿಲ್ವಾ?
ಹೆಂಡತಿ: ಇಲ್ಲ ರೀ!
ಗಂಡ: ಹೋಗ್ಲಿ ಬಿಡು. ಈಗ ಗಾಡಿ ಎಲ್ಲಿದೆ?
ಹೆಂಡತಿ: ಕೊಳದಲ್ಲಿ ಮುಳುಗಿದೆ.

*****

## ನಡೆದು ಬಂದ ಹಾದಿ
## ಮಲ್ಲಿಗೆ ಕನ್ನಡ ಸಂಘ–ಡಲ್ಲಾಸ್

**ಮೀನಾ ಭಾರದ್ವಾಜ್**

**1994ರ** ಯುಗಾದಿಯ ಸಮಯ.ಎಂದಿನಂತೆ ನಾಲ್ಕೈದು ಕುಟುಂಬಗಳು ಯುಗಾದಿ ಆಚರಿಸಲು ಶ್ರೀಮತಿ ಸುಮಾ ಕುಲಕರ್ಣಿಯವರ ಮನೆಯಲ್ಲಿ ಸೇರಿದ್ದರು. ಅದರಲ್ಲಿ ಉಪಸ್ಥಿತರಿದ್ದ ಶ್ರೀಮತಿ ಕಲ್ಪನಾ ರಾವ್ ಪ್ರತಿವರ್ಷ ನಾವೇ ನಾಲ್ಕೈದು ಕುಟುಂಬಗಳು ಸೇರುತ್ತೇವೆ.ಇಷ್ಟು ದೊಡ್ಡ ನಗರದಲ್ಲಿ ಬೇರೆ ಕನ್ನಡದವರೂ ಇರಬಹುದಾ? ಎಲ್ಲ ಊರಿನಲ್ಲೂ ಒಂದೊಂದು ಕನ್ನಡ ಸಂಘವಿದೆ. ನಾವೇಕೆ ಡಲ್ಲಾಸ್‌ನಲ್ಲಿ ಒಂದು ಕನ್ನಡ ಸಂಘ ಶುರು ಮಾಡಬಾರದು? ಇದೆ ನೆಪದಲ್ಲಿ ನಾವು ಬೇರೆ ಕನ್ನಡಿಗರನ್ನು ಭೇಟಿ ಮಾಡಬಹುದು. ನಾವು ಈ ಕ್ಷಣದಿಂದಲೇ ಒಂದು ಕನ್ನಡ ಸಂಘವನ್ನು ಶುರು ಮಾಡೋಣ.ಸರ್ವಾನುಮತದಿಂದ "ಮಲ್ಲಿಗೆ" ಎಂದು ನಾಮಕರಣ ಮಾಡಲಾಯಿತು.

ನಾಯಕನಿಲ್ಲದ ಸಂಘ ಹೇಗೆ? ಇದಕ್ಕೆ ಒಬ್ಬ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು ಬೇಕಲ್ಲವೇ ಎಂದಾಗ ಶ್ರೀಮತಿ ಸುಮಾ ಕುಲಕರ್ಣಿಯವರು ನಾವ್ಯಾಕೆ ಎಲ್ಲರ ಹೆಸರನ್ನು ಚೀಟಿಗಳಲ್ಲಿ ಬರೆದು ಗಾಳಿಯಲ್ಲಿ ತೂರಿ ನೋಡಬಾರದು ಎಂದು ಸಲಹೆಯನ್ನು ಇತ್ತರು. ಆ ಸಲಹೆಯ ಮೇರೆಗೆ ಚೀಟಿಯನ್ನು ಎತ್ತಿ ನೋಡಿದಾಗ ಬಂದಂಥ ಹೆಸರು ಕಲ್ಪನಾ ರಾವ್. ಕನ್ನಡದ ಬಗ್ಗೆ ಅಪಾರ ಪ್ರೇಮ, ಕನ್ನಡಿಗರ ಬಗ್ಗೆ ಅಪಾರ ಮಮತೆ ಇದೆರಡು ಬತ್ತಳಿಕೆಯಲ್ಲಿದ್ದ ಬಾಣಗಳು. ಆದರೂ ಕನ್ನಡಿಗರನ್ನು ಹೇಗೆ ಒಂದುಗೂಡಿಸುವುದು, ಹೇಗೆ ಅವರನ್ನು ಸಂಘಕ್ಕೆ ಕರೆತರುವುದು ಎನ್ನುವುದು ದೊಡ್ಡ ಸವಾಲಿನ ವಿಷಯ. ಭಾರತೀಯರು ಎಲ್ಲಿ ಸೇರುತ್ತಿದ್ದರೋ ಅಂತ ಕಾರ್ಯಕ್ರಮಗಳಿಗೆಲ್ಲ ಹೋಗಿ ಕನ್ನಡ ಸಂಘದ ವಿವರಗಳನ್ನು ಕೊಟ್ಟು ಸದಸ್ಯರನ್ನು ಕರೆತಂದರು.

2 ವರ್ಷದ ನಂತರ ಅಧ್ಯಕ್ಷಗಿರಿ ಡಾ॥ಕೃಷ್ಣರಾವ್ ಅವರ ಕೈ ಸೇರಿತು.ಸ್ವತಃ ಸಂಗೀತ, ನೃತ್ಯದಲ್ಲಿ ಆಸಕ್ತಿ ಇರುವುದರಿಂದ ಸಂಗೀತ ಹಾಗೂ ನೃತ್ಯ ಕಾರ್ಯಕ್ರಮಕ್ಕೆ ಒತ್ತು ಕೊಡಲಾಯಿತು. ನಂತರ ಬಂದ ಶ್ರೀ.ವೆಂಕಟೇಶ್ ಮೇಲ್ಕೋಟೆ ಅವರು ಹಲವಾರು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು, ಮದರ್ಸ್ ಡೇಗಾಗಿ ಪಿಕ್‌ನಿಕ್‌ಗಳನ್ನೂ ಏರ್ಪಡಿಸಿ ಸದಸ್ಯರನ್ನೆಲ್ಲಾ ಒಟ್ಟುಗೂಡಿಸುತ್ತಿದ್ದರು.

www.mallige.org



mkantcommittee
@gmail.com



2000ನೆ ಇಸವಿಯಲ್ಲಿ ಅಧ್ಯಕ್ಷರಾದ ಶ್ರೀ ರವಿ ಮೇಲಗಿರಿಯವರು ಸ್ವತಃ ಉದ್ಯಮಿಯೂ, ಪ್ರಭಾವಶಾಲಿ ವ್ಯಕ್ತಿಯು ಆಗಿರುವುದರಿಂದ ಸಂಘದ ಪ್ರಗತಿ ಒಂದು ಹಂತ ಮೇಲೇರಿತು. ಇದೇ ಸಮಯದಲ್ಲಿ ಹ್ಯೂಸ್ಟನ್ನಿನಲ್ಲಿ ನಡೆದ ಅಕ್ಕ ಸಮ್ಮೇಳನಕ್ಕೆ ಅದರ ಪದಾಧಿಕಾರಿಗಳು ಸಂಪರ್ಕಿಸಿದಾಗ ದೇಣಿ ಸಂಗ್ರಹಕ್ಕಾಗಿ ಔತಣಕೂಟವೊಂದನ್ನು ಏರ್ಪಡಿಸಿ ಮಲ್ಲಿಗೆ ಕನ್ನಡ ಸಂಘದ ಪರವಾಗಿ ಧನ ಸಂಗ್ರಹ ಮಾಡುವುದರ ಮೂಲಕ ಬೆಂಬಲವನ್ನಿತ್ತರು.

ಸಾಂಸ್ಕೃತಿಕ ಕಲೆಯ ನೆಲೆಬೀಡಾದ ಮೈಸೂರಿನಿಂದ ಬಂದಿರುವ ಶ್ರೀ.ಶ್ರೀವತ್ಸ ರಾಮನಾಥನ್‌ರವರಿಗೆ ಕನ್ನಡ ಭಾಷೆ, ಕನ್ನಡ ಸಂಘವೆಂದರೆ ಅಪಾರ ಪ್ರೇಮ. ಅವರ ಸಮಯದಲ್ಲಿ ಸುಮಾರು 60 ಕುಟುಂಬಗಳ ಸದಸ್ಯತ್ವ 120ಕ್ಕೆ ಏರಿತು. ಅನೇಕ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಿದರು. ಖ್ಯಾತ ಕಲಾವಿದರಾದ ಶಂಭು ಹೆಗಡೆಯವರಿಂದ ಯಕ್ಷಗಾನ, ವಿದ್ಯಾಭೂಷಣರವರಿಂದ ಶಾಸ್ತ್ರೀಯ ಗಾಯನ, ಪ್ರವೀಣ ಗೋಡ್ಖಿಂಡಿ ಹಾಗೂ ಬದರಿ ಪ್ರಸಾದ್ ಅವರ ಕಾರ್ಯಕ್ರಮಗಳನ್ನು ಏರ್ಪಡಿಸಲಾಯಿತು. ರಾಜ್ಯೋತ್ಸವಕ್ಕಾಗಿ ಕ್ರಿಕೆಟ್ ಪಂದ್ಯಗಳಾನ್ನು ನಡೆಸುವ ಪರಿಪಾಠವನ್ನು ಹಾಕಲಾಯಿತು.

ಸಂಘದ ಚುಕ್ಕಾಣಿ ಹಿಡಿಯುವ ನಂತರದ ಸರದಿ ಶ್ರೀಮತಿ ಮೀನಾ ಭಾರದ್ವಾಜ್ ಅವರದಾಗಿತ್ತು.ಕನ್ನಡ ಭಾಷೆ, ಸಾಹಿತ್ಯದಲ್ಲಿ ಅಪಾರ ಪ್ರೇಮ, ಸಿರಿಗನ್ನಡಂ ಗೆಲ್ಗೆ ಎಂಬುದೇ ಮೂಲ ಮಂತ್ರ. ಸ್ನೇಹಜೀವಿಯು, ಜನಾನುರಾಗಿಯು ಆಗಿರುವುದರಿಂದ ಹೆಚ್ಚು ಜನರನ್ನು ಸಂಘಕ್ಕೆ ಆಕರ್ಷಿಸುವಲ್ಲಿ ಯಶಸ್ವಿಯಾದರು. ಸಂಘದ ಸದಸ್ಯತ್ವ 200ಕ್ಕು ಹೆಚ್ಚು ಸಂಖ್ಯೆಯನ್ನು ದಾಟಿತ್ತು. ಇವರ ಅಧ್ಯಕ್ಷಗಿರಿಯಲ್ಲಿ ಎಲ್ಲ ಸದಸ್ಯರ ಬೆಂಬಲದಿಂದ 'ಮಲ್ಲಿಗೆ' ಕನ್ನಡ ಸಂಘ ಒಂದು ಲಾಭರಹಿತ ಸಂಘವಾಗಿ ಮಾರ್ಪಾಟಾಯಿತು. ಇದಕ್ಕೆ ಸಹಾಯಮಾಡಿದ ಶ್ರೀ ರಘು ಬೆಳ್ಳಾರಿ ಮತ್ತು ಶ್ರೀವತ್ಸ ರಾಮನಾಥನ್ ಸ್ಮರಣೀಯರು. ಲಾಭರಹಿತ ಸಂಘವಾದ್ದರಿಂದ ದೇಣಿಸಂಗ್ರಹಕಾರ್ಯ ಸುಗಮವಾಯಿತು. ಇವರ ಸಮಯದಲ್ಲೂ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಹೆಚ್ಚು ಒತ್ತು ಕೊಡಲಾಯಿತು. ಕ್ರಿಕೆಟ್ ಜೊತೆಯಲ್ಲಿ ಕೇರಂ, ಬ್ಯಾಡ್ಮಿಂಟನ್ ಹಾಗೂ ಟೇಬಲ್ ಟೆನ್ನಿಸ್ ಸ್ಪರ್ಧೆಗಳನ್ನು ಸಂಘದ ಸದಸ್ಯರಿಗೆ ಪರಿಚಯಿಸಲಾಯಿತು.

2008 ಹಾಗೂ 2009 ತಲಾ ಒಂದು ವರುಷದ ಹಾಗೆ ಶ್ರೀ ಸುಧೀಂದ್ರ ಪ್ರಹ್ಲಾದನ್ ಹಾಗೂ ಶ್ರೀ ಮಧು ಶಾಸ್ತ್ರಿಯವರು ಅಧ್ಯಕ್ಷರಾಗಿ ಸಂಘದ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಿಕೊಟ್ಟಿದ್ದಾರೆ.ಸ್ಥಳೀಯ ಟೆಲಿಕಾಂ ಕಂಪನಿಯಲ್ಲಿ ಒಂದಾದ ವೆರೈಸ್ಸಾನ್ ಕಂಪನಿಯಿಂದ ಗಣಾನೀಯ ಮೊತ್ತದ ದೇಣಿಯನ್ನು ಸಂಗ್ರಹಿಸಿ ಸಂಘಕ್ಕೆ ಶ್ರೀ ಸುಧೀಂದ್ರರವರು ಇತ್ತಿದ್ದಾರೆ.

ಉಪಾಧ್ಯಕ್ಷೆಯಾಗಿ ಅನುಭವಿರುವ, ಶ್ರೀಮತಿ ರಾಜಶ್ರೀ ರಮೇಶ್‌ರವರು ಸರ್ವಾನುಮತದಿಂದ ಪ್ರಸ್ತುತ ಅಧ್ಯಕ್ಷ ಸ್ಥಾನಕ್ಕೆ ಆಯ್ಕೆಯಾಗಿರುತ್ತಾರೆ. ಶ್ರೀನಾಥ್ ಬೆಲ್ದೋಣ ಉಪಾಧ್ಯಕ್ಷ ಸ್ಥಾನಕ್ಕೆ, ಸುಕುಮಾರ್ ಮುತ್ಯ ಕಾರ್ಯದರ್ಶಿಯಾಗಿ, ಶ್ರೀಧರ್ ಮಧುಗಿರಿಯವರನ್ನು ಖಜಾಂಚಿಯಾಗಿ ಆಯ್ದುಕೊಂಡು ಸಮಿತಿಯನ್ನು ರಚಿಸಿದ್ದಾರೆ.

www.mallige.org



mkantcommittee
@gmail.com



ಇವರ ನೇತೃತ್ವದಲ್ಲಿ ಸಂಘ ಇನ್ನೂ ಹೆಚ್ಚು ಯಶಸ್ಸನ್ನು ಕಾಣುವುದರಲ್ಲಿ ಯಾವುದೇ ಸಂದೇಹವಿಲ್ಲ.

ಒಟ್ಟಿನಲ್ಲಿ ಮಲ್ಲಿಗೆ ಕನ್ನಡ ಸಂಘವೊಂದು ಯಶಸ್ವೀ ಸಂಘ. ಇದರ ಪರಿಮಳ ಎಲ್ಲೆಡೆ ಬೀರುತ್ತಿದೆ. ಸಂಘವು ಇತರೆ ಸ್ಥಳೀಯ ಸಂಘಗಳೊಡಗೂಡಿ ಹಲವಾರು ಕಾರ್ಯಕ್ರಮಗಳನ್ನು ನಡೆಸುತ್ತಾ ಬಂದಿದೆ. ಸ್ಥಳೀಯ ದೇವಸ್ಥಾನದಲ್ಲಿ ನಡೆಯುವ ಗೌರಿ ಪೂಜೆ, ಪುರಂದರದಾಸರ ಆರಾಧನೆ ಹಾಗೂ ಅಲ್ಲಿ ನಡೆಯುವ ಅರಳು ಮಲ್ಲಿಗೆ ಕನ್ನಡ ಶಾಲೆಗೆ ತನ್ನ ಸತತ ಬೆಂಬಲವನ್ನಿತ್ತಿದೆ. ಮಲ್ಲಿಗೆ ಕನ್ನಡ ಸಂಘ ಒಂದು ಲಾಭರಹಿತ ಸೇವಾ ಮನೋಭಾವನೆಯ ಸಂಘವಾದ್ದರಿಂದ ಇದು ನಾನಾ ರೀತಿಯ ದತ್ತಿ ಕಾರ್ಯಕ್ರಮಗಳಾಲ್ಲಿ ಭಾಗಿಯಾಗಿದೆ. ಅದರಲ್ಲಿ ಮುಖ್ಯವಾದವು ಬೆಂಗಳೂರಿನಲ್ಲಿರುವ ಅಂಧರ ಏಳಿಗೆಗೆ ದುಡಿಯುತ್ತಿರುವ 'ಸಮರ್ಥನಂ'ಗಾಗಿ ಹಾಗೂ ನಾರ್ತ್ ಟೆಕ್ಸಾಸ್ ಫ಼ುಡ್ ಬ್ಯಾಂಕ್‌ಗಾಗಿ ಆಹಾರ ಸಂಗ್ರಹ ಕಾರ್ಯಕ್ರಮ.

ಸ್ಥಳೀಯ ಕನ್ನಡಿಗರಿಗೆ ತಾವು ತಾಯಿನಾಡಿನಿಂದ ದೂರವಿಲ್ಲ ಎನ್ನುವ ಭಾವನೆಯನ್ನು ತೊರೆದುಹಾಕಿದೆ. ಎಲ್ಲಾದರು ಇರು– ಎಂತಾದರು ಇರು ಎಂಬ ಕವಿವಾಣಿಯಂತೆ ಇಲ್ಲಿನ ಸದಸ್ಯರು ಕನ್ನಡ ಸಂಘ ಹಾಗೂ ಕನ್ನ್ನಡದ ಬಗ್ಗೆ ಅಪಾರ ಪ್ರೇಮ ಹಾಗೂ ಅಭಿಮಾನದಿಂದ ಸದಾ ತಮ್ಮ ಬೆಂಬಲವನ್ನಿತ್ತು ಸಹಕರಿಸುತ್ತಿದ್ದಾರೆ.

ಹೆಚ್ಚಿನ ವಿವರಗಳಿಗಾಗಿ ಮಲ್ಲಿಗೆ ಕನ್ನಡ ಸಂಘದ ಅಂತರ್ಜಾಲ ತಾಣವನ್ನು ಸಂಪರ್ಕಿಸಿ. www.mallige.org ಅಥವಾ ಇ–ಮೇಲ್‌ನನ್ನು ಕೆಳಕಂದ ವಿಳಾಸಕ್ಕೆ ಕಳುಹಿಸಿ mkantcommittee@gmail.com

## ನೆರೆಮನೆಯ ನರುಗಂಪು

## ಕಾರ್ತೀಕ ದೀಪ

**ಶ್ರೀವತ್ಸ ಜೋಶಿ,**
**ವರ್ಜೀನಿಯ.**
**(ವಿಚಿತ್ರಾನ್ನ ಮತ್ತು ಪರಾಗ ಸ್ಪರ್ಶ ಅಂಕಣಕಾರರು)**

ಕಾರ್ತೀಕ ಮಾಸವು (ಚಾಂದ್ರಮಾನ ರೀತ್ಯಾ ಎಂಟನೆಯ ತಿಂಗಳು) ಕೃಷ್ಣನಿಗೆ ಅತ್ಯಂತ ಪ್ರಿಯವಾದುದು ಎಂಬ ಪ್ರತೀತಿಯಿದೆ.ಯುಗಗಳಲ್ಲಿ ಕೃತ(ಸತ್ಯ)ಯುಗ, ಧರ್ಮಗ್ರಂಥಗಳಲ್ಲಿ ವೇದಗಳು, ನದಿಗಳಾ ಪೈಕಿ ಗಂಗಾ, ಗಿಡಗಳ ಪೈಕಿ ತುಳಸಿ, ತೀರ್ಥಕ್ಷೇತ್ರಗಳಲ್ಲಿ ದ್ವಾರಕಾ, ತಿಥಿಗಳಲ್ಲಿ ಏಕಾದಶಿ ಮತ್ತು ಮಾಸಗಳ ಪೈಕಿ ಕಾರ್ತೀಕ–ಇವಿಷ್ಟೂ ಕೃಷ್ಣನ ನೆಚ್ಚಿನವು ಎನ್ನುತ್ತದೆ ಸ್ಕಂದಪುರಾಣ, ಪದ್ಮಪುರಾಣ, ಭಾಗವತ ಇತ್ಯಾದಿ ಕೃಷ್ಣಕಥೆಯ ಪುರಾಣಗಳು.

ಕಾರ್ತೀಕ ಮಾಸವನ್ನು 'ದಾಮೋದರ' ಮಾಸವೆಂದೂ (ಮುಖ್ಯವಾಗಿ ವೈಷ್ಣವ ಪಂಥಾನುಯಾಯಿಗಳು) ಕರೆಯುತ್ತಾರೆ. ನಮಗೆಲ್ಲ ಗೊತ್ತಿರುವಂತೆ 'ದಾಮೋದರ' ಎಂಬುದು ಶ್ರೀಕೃಷ್ಣನ ಒಂದು ಹೆಸರು. ಆದರೆ, ಕಾರ್ತೀಕ ಮಾಸಕ್ಕೆ ಯಾಕೆ ಆ ಹೆಸರು ಬಂತು ಮತ್ತು ಅದಕ್ಕಿಂತಲೂ ಮೊದಲು ಕೃಷ್ಣನಿಗೆ ಯಾಕೆ ದಾಮೋದರ ಎಂಬ ಹೆಸರು?

ಈ ವಿವರಗಳಿಗೆ ನಾವು ಶ್ರೀಕೃಷ್ಣ ಪರಮಾತ್ಮನ ಬಾಲಲೀಲೆಗಳನ್ನು ನೆನಪಿಸಿಕೊಳ್ಳಬೇಕಾಗುತ್ತದೆ.

www.mallige.org



mkantcommittee
@gmail.com



ನಂದಗೋಕುಲದಲ್ಲಿ ಬಾಲಕೃಷ್ಣನ ತುಂಟಾಟಗಳಿಗೆ ಕೊನೆಯೆಂಬುದೇ ಇಲ್ಲ.ಅದೊಂದು ದಿನ ತಾಯಿ ಯಶೋದೆ ಹಾಲೂಡಿಸುವುದನ್ನು ಅರ್ಧಕ್ಕೇ ನಿಲ್ಲಿಸಿ ಬೇರೆ ಕೆಲಸಕ್ಕೆ ತೊಡಗಿದಳು ಎಂಬ ಸಿಟ್ಟಿನಿಂದ ಮನೆಯೊಳಗಿನ ಬೆಣ್ಣೆಗಡಿಗೆಗಳನ್ನೆಲ್ಲ ಒಡೆದುಹಾಕಿದ್ದನಂತೆ ಆ ಬಾಲರೂಪಿ ಭಗವಂತ! ಎಷ್ಟು ರಮಿಸಿದರೂ ಅವನ ಚೇಷ್ಟೆಗಳು ನಿಲ್ಲದಾದಾಗ ಯಶೋದೆ ಒಂದು ಉಪಾಯ ಹೂಡಿದಳು. ದನಕರುಗಳಾನ್ನು ಕಟ್ಟಲಿಕ್ಕೆ ಉಪಯೋಗಿಸುವ ಹಗ್ಗವನ್ನು ತಂದು ಕೃಷ್ಣನ ಹೊಟ್ಟೆಯ ಸುತ್ತ ಕಟ್ಟಿದಳು.ಹಗ್ಗದ ಇನ್ನೊಂದು ತುದಿಯನ್ನು ಒರಳುಕಲ್ಲಿಗೆ ಬಿಗಿದಳು.ಹೀಗೆ ಹೊಟ್ಟೆಗೆ ಹಗ್ಗ ಕಟ್ಟಲ್ಪಟ್ಟ ಕೃಷ್ಣ 'ದಾಮೋದರ' ಎನಿಸಿಕೊಂಡ. ಒರಳುಕಲ್ಲಿಗೆ ಕಟ್ಟಿದಮೇಲಾದರೂ ತುಂಟಪೋರ ಒಂದುಕಡೆ ಸುಮ್ಮನಾಗಬಹುದು ಎಂದು ಯಶೋದೆಯ ಅಂದಾಜು.ಆದರೆ ಕೃಷ್ಣ ಹಗ್ಗದೊಂದಿಗೆ ಆ ಒರಳುಕಲ್ಲನ್ನೂ ಎಳೆದುಕೊಂಡು ಹೋಗಿ, ಅದು ಅವಳಿಮರಗಳಿಗೆ ಸಿಕ್ಕಿಹಾಕಿಕೊಂಡು ಅವು ಮುರಿದುಬಿದ್ದು ಮೋಕ್ಷ ಹೊಂದಿದವು.ಮತ್ತೆ ಕುಬೇರನ ಮಕ್ಕಳಾಗಿ ಪುನರುಜ್ಜೀವವಾದರು... ಇತ್ಯಾದಿ ಕಥೆ ಮುಂದುವರಿಯುತ್ತದೆ. ಕೃಷ್ಣ ಈ ರೀತಿ 'ದಾಮೋದರ'ನಾದ ಘಟನೆ ನಡೆದದ್ದು ಕಾರ್ತೀಕ ಮಾಸದಲ್ಲಿ.ಆದ್ದರಿಂದಲೇ ಕಾರ್ತೀಕ ಮಾಸಕ್ಕೆ ದಾಮೋದರ ಮಾಸ ಎಂಬ ಹೆಸರು. ಮತ್ತೆ ಕೃಷ್ಣನಿಗೆ ಈ ಮಾಸವು ಅತಿ ಪ್ರಿಯವೂ ಆಗಿರುವುದರಿಂದ ಕೃಷ್ಣಭಕ್ತರ ನಾಲಗೆಯಲ್ಲಿ ಈ ತಿಂಗಳಿಡೀ ದಾಮೋದರನದೇ ಗುಣಗಾನ – ಜಿಹ್ವೇ ಪಿಬಸ್ವಾಮೃತಮೇತದೇವ..ಗೋವಿಂದ ದಾಮೋದರ ಮಾಧವೇತಿ!

ದಾಮೋದರ(ಕಾರ್ತೀಕ) ಮಾಸದಲ್ಲಿ ಪ್ರತಿದಿನವೂ ದಾಮೋದರನ್ನು ಪೂಜಿಸಬೇಕು. ದಾಮೋದರಾಷ್ಟಕವನ್ನು ಪಠಿಸಬೇಕು. ವ್ರತನಿಯಮಗಳನ್ನು ಪಾಲಿಸಬೇಕು ಮತ್ತು ಎಲ್ಲಕ್ಕಿಂತ ಮುಖ್ಯವಾಗಿ ದಾಮೋದರನಿಗೆ ದೀಪದಾನ ಮಾಡಬೇಕು!

ಕಾರ್ತೀಕ ಮಾಸಕ್ಕೂ ದೀಪಕ್ಕೂ ಇರುವ ನಂಟು ಯುಗಯುಗಗಳಿಂದಲೂ ಂದದ್ದು. ಕಾರ್ತೀಕ ಮಾಸದಲ್ಲಿ ಒಂದೇ ಒಂದು ದೀಪವನ್ನು ಹಚ್ಚಿದರೂ ಅದು ಅಶ್ವಮೇಧ ಯಜ್ಞವನ್ನು ಮಾಡಿದಷ್ಟೇ ಪುಣ್ಯಪ್ರದವಾದದ್ದೆಂಬ ನಂಬಿಕೆಯಿದೆ. ಮೇರು–ಮಂದಾರ ಪರ್ವತಗಳಾಷ್ಟು ಪ್ರಮಾಣದಲ್ಲಿ ಪಾಪಸಂಚಯವಾಗಿದ್ದವರೂ ಕಾರ್ತೀಕಮಾಸದಲ್ಲಿ ದೀಪ ಬೆಳಗಿದರೆ ಆ ಪಾಪಗಳೆಲ್ಲ ಕಣ್ಣುಮುಚ್ಚಿತೆರೆಯುವುದರೊಳಗೆ ಆ ದೀಪಜ್ಯೋತಿಯೊಂದಿಗೇ ಉರಿದುಹೋಗುತ್ತವೆಯಂತೆ.

ಸ್ಕಂದ ಪುರಾಣದ ಒಂದು ಶ್ಲೋಕ ಮತ್ತು ಅದು ವಿವರಿಸುವ ಕಥೆ ಹೀಗಿದೆ:

ಏಕದ್ವಾಸ್ಯಂ ಪರೇರ್ದತ್ತಂ ದೀಪಂ ಪ್ರಜ್ವಾಲ್ಯ ಮೂಷಿಕಾ
ಮಾನುಷ್ಯಂ ದುರ್ಲಭಂ ಪ್ರಾಪ್ಯ ಪರಂ ಗತಿಂ ಅವಾಪ ಸಾ ॥

ವಿಷ್ಣುದೇವಸ್ಥಾನವೊಂದರ ಗರ್ಭಗುಡಿಯಲ್ಲಿ ಒಂದು ಹೆಣ್ಣು ಇಲಿ ಸೇರಿಕೊಂಡಿತ್ತಂತೆ. ಭಕ್ತರು ಅರ್ಪಿಸುವ ತುಪ್ಪದ ದೀಪಗಳು ಆರಿದ ನಂತರ ಅದರಲ್ಲುಳಿದ ತುಪ್ಪವನ್ನು ತಿನ್ನುವುದು ಆ ಇಲಿಯ ನಿತ್ಯಕಾಯಕ.

# ಕಂಪು

## ಕಂನಡಿಗರ ಪೆಂಪು

ಮಲ್ಲಿಗೆ ಕನ್ನಡ ಸಂಘದ ಇ-ಪತ್ರಿಕೆ
ದೀಪಾವಳಿ ಸಂಚಿಕೆ

**Newsletter of MKANT**
**Deepavali 2010**

www.mallige.org

mkantcommittee@gmail.com





ಒಂದು ದಿನ ಇಲಿಗೆ ತುಂಬ ಹಸಿವಾಗಿತ್ತು. ದೀಪಗಳಿನ್ನೂ ನಂದಿಹೋಗಿರಲಿಲ್ಲ. ತುಪ್ಪ ತಿನ್ನುವ ಆತಿಯಾಸೆಯಿಂದ, ಉರಿಯುತ್ತಲೇ ಇದ್ದ ಬತ್ತಿಯನ್ನು ಬಾಯಲ್ಲಿ ಕಚ್ಚಿ ಹಿಡಿಯಿತು ಆ ನತದೃಷ್ಟ ಇಲಿ. ಧಗೆ ತಾಳಲಾರದೆ ಅತ್ತಿಂದಿತ್ತ ಕುಣಿದಾಡಿತು.ಕೊನೆಗೆ ಸತ್ತೇ ಹೋಯಿತು. ಪರಮದಯಾಳು ಪರಮಾತ್ಮನಾದರೋ ಅದು ತನಗೆ ಇಲಿಯಿಂದಾದ ದೀಪಸೇವೆಯೆಂದು ಪರಿಗಣಿಸಿ ಸತ್ತ ಇಲಿಗೆ ಮೋಕ್ಷ ಕರುಣಿಸಿ ಅತಿದುರ್ಲಭವಾದ ಮನುಷ್ಯಜನ್ಮವನ್ನು ಅದಕ್ಕೆ ದಯಪಾಲಿಸಿದನಂತೆ!

ದೀಪಬೆಳಗುವುದರಿಂದಾಗುವ ಸತ್ಫಲ ಪ್ರತಿಪಾದನೆಗೆ ಇದಕ್ಕಿಂತ ಹೆಚ್ಚಿನ ಪುರಾವೆ ಇನ್ನೇನು ಬೇಕು?

ದೀಪ ಬೆಳಗುವುದನ್ನು ನಾವು ನಿತ್ಯವೂ ಮಾಡುತ್ತೇವೆ. ಕಾರ್ತೀಕ ಮಾಸದಲ್ಲಂತೂ ದೀಪಾವಳಿಯಿಂದ ಆರಂಭವಾಗಿ ದೀಪೋತ್ಸವ ವೈಭವದ ತನಕ ಲಕ್ಷಲಕ್ಷ ದೀಪಗಳನ್ನು ಉರಿಸುತ್ತೇವೆ. ತ್ರೈಲೋಕ್ಯ ತಿಮಿರಾಪಃ– ಮೂರು ಲೋಕಗಳ ಕತ್ತಲನ್ನೂ ತೊಳೆದು ಜಗವೆಲ್ಲ ಜ್ಯೋತಿರ್ಮಯವಾಗಲಿ ಎಂದು ದೀಪ ಹಚ್ಚಿಟ್ಟು ಹರಸುತ್ತೇವೆ. ನಿಜಕ್ಕೂ ದೀಪದಾನದ– ಅಂದರೆ ದೀಪವನ್ನು ಉರಿಸಿ ಬೆಳಕನ್ನು ಹರಡುವ ಆ ಸತ್ಕರ್ಮದ – ಅರ್ಥ, ಆಶಯ, ಆಚಾರಗಳು ಪರಮೋಚ್ಚವಾದವು.

ಅದರಲ್ಲೂ ಅಕ್ಷರಶಃ ಅತ್ಯುನ್ನತವಾದುದು ಆಕಾಶದೀಪ! ಆಕಾಶದೀಪ ಸಹ ಕಾರ್ತೀಕ ಮಾಸದ್ದೇ ಒಂದು ವೈಶಿಷ್ಟ್ಯ. ಅದೂ ದಾಮೋದರನಿಗೇ ಸಮರ್ಪಿತ.

ಆಕಾಶದೀಪವನ್ನು ಉರಿಸುವಾಗ ಹೇಳಬೇಕಾದ ಮಂತ್ರ ಹರಿಭಕ್ತಿವಿಲಾಸದ 16ನೇ ಅಧ್ಯಾಯದಲ್ಲಿ ಬರುತ್ತದೆ (149ನೇ ಶ್ಲೋಕ). ಅದು ಹೀಗಿದೆ:

ದಾಮೋದರಾಯ ನಭಸಿ ತುಲಾಯಾಂ
ಲೋಲಯಾ ಸಹ
ಪ್ರದೀಪಂ ತೇ ಪ್ರಯಚ್ಛಾಮಿ
ನಮೋನಂತಾಯ ವೇಧಸೆ!!

ತುಲಾ(ಚಾಂದ್ರಮಾನ ಕಾರ್ತೀಕಕ್ಕೆ ಹೆಚ್ಚು ಕಡಿಮೆ ಸಮಕಾಲೀನವಾದುದು ಸೌರಮಾನ ಮಾಸ ತುಲಾ)ಮಾಸದಲ್ಲಿ ಲಕ್ಷ್ಮೀಸಹಿತನಾದ(ಲೋಲ ಎಂದರೆ ಲಕ್ಷ್ಮಿ) ದಾಮೋದರನಿಗೆ, ಆಕಾಶದಲ್ಲಿ ದೀಪವನ್ನಿ ಹಚ್ಚಿಡುತ್ತೇನೆ; ಅನಂತಕ್ರಿಯಾಶಕ್ತಿಯುಳ್ಳವನಿಗೆ ನಮಿಸುತ್ತಿದ್ದೇನೆ – ಇದು ಮಂತ್ರದ ಅರ್ಥ.

ದಾಮೋದರನಿಗೆ ದೀಪನಮನವು ಆಕಾಶದೀಪದ ಒಂದು ಆಶಯವಾದರೆ, ಆಗ ತಾನೆ ಮಹಾಲಯಪಕ್ಷದಲ್ಲಿ ಭೂಲೋಕಕ್ಕೆ ಭೇಟಿಯಿತ್ತು ವಾಪಸಾಗುತ್ತಿರುವ ಪಿತೃಗಳಿಗೆ ಮತ್ತೆ ದೇವಲೋಕವನ್ನು ತಲುಪಲು ಮಾರ್ಗದರ್ಶಿ ಬೆಳಕಾಗಿ ಆಕಾಶದೀಪವನ್ನು ಹಚ್ಚಿಡುವುದು ಎಂಬ ನಂಬಿಕೆಯೂ ಇದೆ. ಪಿತೃಗಳನ್ನು ಸಂತೃಪ್ತಿಪಡಿಸುವ ಉದ್ದೇಶವೆಂಬ ಈ ಕಲ್ಪನೆಯೂ ಆಕಾಶದೀಪದ ಅಂತರಾರ್ಥ ಔನ್ನತ್ಯವನ್ನು ಇನ್ನಷ್ಟು ಹೆಚ್ಚಿಸುತ್ತದೆ. ಆಗಲೇ ಹೇಳಿದಂತೆ, ಕಾರ್ತೀಕ ಮಾಸದಲ್ಲಿ ದೀಪದಾನ ಮಾಡುವ ವಂಶೋದ್ಧಾರಕನ ಸಂಸ್ಕಾರ ಶ್ರೀಮಂತಿಕೆಯನ್ನು, ಸಂಸ್ಕೃತಿಯ ಸತ್ವವನ್ನು ಕಂಡಾದರೂ ಪಿತೃಗಳು ಸಂತೃಪ್ತರಾಗಲೇಬೇಕಲ್ಲವೇ?

*********

www.mallige.org



mkantcommittee
@gmail.com



# Sports Results

| Event | Winner(s) | Runner(s) |
|---|---|---|
| Cricket | Team: Dallas Dynamites<br>1. Srinidhi Kaniyar<br>2. Manjesh Venkat<br>3. Srikanth Murthy<br>4. Pawan Gunjur<br>5. Krishna Murthy<br>6. Sriram Thiruvenkatam<br>7. Ramesh Melkote<br>8. Dattatreya | Team: Idli-Vade-Chatni BaLaga<br>1. Datta Prasad<br>2. Vinay BR<br>3. Srinivas Ranganna<br>4. Rajesh Matti<br>5. Rajesh Bankapur<br>6. Nagaraj<br>7. Ravindra Pai<br>8. Vasu |
| Tennis - Mens Singles | Sadanand Hegde and Srinidhi Kaniyar - Joir winners | |
| Tennis - Mens Doubles | Sadanand Hegde & Srinivas Venkateshaiah | Raghu Chivakula & Srish Sawkar |
| Tennis Womens Singles | Vidya Datta | Shylaja Nagenhalli |
| Racquet Ball -Mens | Pratap BR | Srikannth Murthy |
| Badminton Mens Singles | Pratap | Manjesh |
| Badminton Mens Doubles | Pratap BR and Manjesh Venkat | Krishna Doddamane and Sukumar Muthya |
| Table Tennis Mens Singles | Manjesh Venkat | Srinidhi Kaniyar |
| Chess - Kids | Rishab Vadvadgi | Manish Bhardvaj |
| Carrom Doubles | Raghu Anantharama & Sridhara Madhugiri | Srikanth Murthy and Anita |

www.mallige.org





mkantcommittee
@gmail.com




## ಪಿಕ್‌ನಿಕ್ ಚಿತ್ರಗಳು



ಹೆಚ್ಚಿನ ಚಿತ್ರಗಳಿಗೆ ಭೇಟಿ ಕೊಡಿ www.mallige.org

ಕಂಪು

ಕಂನಡಿಗರ ಪೆಂಪು

ಮಲ್ಲಿಗೆ ಕನ್ನಡ ಸಂಘದ ಇ-ಪತ್ರಿಕೆ

ದೀಪಾವಳಿ ಸಂಚಿಕೆ

Newsletter of MKANT
Deepavali 2010

www.mallige.org



mkantcommittee
@gmail.com



# ಸಂಗೀತ ಕಚೇರಿ ಚಿತ್ರಗಳು



ಹೆಚ್ಚಿನ ಚಿತ್ರಗಳಿಗೆ ಭೇಟಿ ಕೊಡಿ www.mallige.org